# ಕರ್ನಾಟಕ ಕ್ರಿಕೆಟ್‌ನ ಉದಯೋನ್ಮುಖ ತಾರೆ ಸ್ಮರಣ್



ಸ್ಮರಣ್ ಅವರ ಬ್ಯಾಟಿಂಗ್ ಶೈಲಿ ಆಪ್ಯಾಯಮಾನ. ನಿಖರವಾದ ಕಟ್‌ಗಳನ್ನು ಪ್ರಯೋಗಿಸುವ ಅವರ ಬ್ಯಾಟ್ ಸ್ವಿಂಗ್ ಕೂಡ ಅಷ್ಟೇ ಕರಾರುವಾಕ್ಕಾಗಿದೆ. ಚುರುಕಾದ ಪಾದಚಲನೆ ಅವರ ಪ್ಲಸ್ ಪಾಯಿಂಟ್‌..

■ ಗಿರೀಶ ದೊಡ್ಡಮನಿ

ಹೋದ ವರ್ಷದ ರಣಜಿ ಕ್ರಿಕೆಟ್ ಋತುವಿನಲ್ಲಿ ಕರುಣ್ ನಾಯರ್ ಮತ್ತು ಮನೀಷ್ ಪಾಂಡೆ ಅವರ ಗೈರು ಹಾಜರಿಯಲ್ಲಿ ಕರ್ನಾಟಕ ತಂಡದ ಬ್ಯಾಟಿಂಗ್ ವಿಭಾಗಕ್ಕೆ ಬಲ ತುಂಬಿದ್ದು ಸ್ಮರಣ್ ರವಿಚಂದ್ರನ್. ಪದಾರ್ಪಣೆಯ ಅವಕಾಶ ಗಿಟ್ಟಿಸಿದ್ದ ಎಡಗೈ ಬ್ಯಾಟರ್ ಸ್ಮರಣ್ ಅವರು ರನ್‌ಗಳ ಹೊಳೆ ಹರಿಸಿದ್ದರು. ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದರು.

ಆ ಋತುವಿನಲ್ಲಿ ಮಾಡಿದ ಸಾಧನೆಯೇ ಈ ವರ್ಷವೂ ಅವರಿಗೆ ಶ್ರೀರಕ್ಷೆಯಾಯಿತು. ಏಕೆಂದರೆ; ಕರುಣ್ ನಾಯರ್ ಅವರಂತಹ ಅನುಭವಿ ತಂಡಕ್ಕೆ ಮರಳಿದ್ದರಿಂದ ಸ್ಮರಣ್ ಸ್ಥಾನ ಪಡೆಯುವರೇ ಎಂಬ ಜಿಜ್ಞಾಸೆ ಮೂಡಿತ್ತು. ಆದರೆ ಈ ಬಾರಿಯ ರಣಜಿ ಟೂರ್ನಿಯ ಮೊದಲ ಹಂತದ ಐದು ಪಂದ್ಯಗಳಲ್ಲಿ ಭರ್ಜರಿ ಬ್ಯಾಟಿಂಗ್ ಮಾಡಿದ್ದಾರೆ ಸ್ಮರಣ್. ಅದೂ ಕರುಣ್ ಅವರೊಂದಿಗೆ ಜೊತೆಯಾಟಗಳನ್ನೂ ಆಡಿ ತಾವು 'ದೀರ್ಘ ಓಟದ ಕುದುರೆ' ಎಂಬ ಸಂದೇಶ ರವಾನಿಸಿದ್ದಾರೆ. ಐದು ಪಂದ್ಯಗಳಿಂದ 595 ರನ್‌ಗಳನ್ನು ಕಲೆಹಾಕಿದ್ದಾರೆ. ಅದರಲ್ಲಿ ಎರಡು ಭರ್ಜರಿ ದ್ವಿಶತಕಗಳು ಇವೆ.

ಮಂಗಲಪುರದಲ್ಲಿ ನಡೆದಿದ್ದ ಕೇರಳ ವಿರುದ್ಧದ ಪಂದ್ಯದಲ್ಲಿ ಅವರು ಕರುಣ್ ಜೊತೆಗೆ 343 ರನ್‌ಗಳನ್ನು ಸೇರಿಸಿದ್ದರು. ಅದರಿಂದಾಗಿ ಆ ಪಂದ್ಯದಲ್ಲಿ ಕರ್ನಾಟಕ ತಂಡವು ಭರ್ಜರಿ ಗೆಲುವು ಸಾಧಿಸಿತ್ತು. ಹುಬ್ಬಳ್ಳಿಯಲ್ಲಿ ನಡೆದ ಚಂಡೀಗಢ ಎದುರಿನ ಪಂದ್ಯದಲ್ಲಿ ಅವರ ಆಟ ರಂಗೇರಿತು. ಅಲ್ಲಿಯೂ ಕರುಣ್ ಜೊತೆಗೆ ಶತಕದ ಜೊತೆಯಾಟವಾಡಿದರು. ತಮ್ಮ ಅಜೇಯ ದ್ವಿಶತಕ ಕೂಡ ದಾಖಲಿಸಿದ ಸ್ಮರಣ್ ಮಿಂಚಿದರು.

ಸ್ಮರಣ್ ತಣ್ಣಗಿನ ಸ್ವಭಾವದ ಹುಡುಗ. ಅವರ ಬ್ಯಾಟಿಂಗ್ ಮಾತ್ರ ಬೌಲರ್‌ಗಳಿಗೆ ಬಿಸಿ ಮುಟ್ಟಿಸುತ್ತದೆ. ಸ್ಮರಣ್ ಅವರ ವಿಶೇಷವೆಂದರೆ, ಯಾವುದೇ ಮಾದರಿಗೂ ಹೊಂದಿಕೊಳ್ಳುತ್ತಾರೆ. ರಣಜಿ ಋತುವಿನ ಮೊದಲ ಹಂತ ಮುಗಿದ ಒಂದು ವಾರದ ನಂತರ ಆರಂಭವಾದ ಸೈಯದ್ ಮುಷ್ತಾಕ್ ಅಲಿ ಕ್ರಿಕೆಟ್ ಟೂರ್ನಿಯ ಟಿ20 ಪಂದ್ಯದಲ್ಲಿಯೂ ಅರ್ಧಶತಕದೊಂದಿಗೆ ಅಭಿಯಾನ ಆರಂಭಿಸಿದ್ದಾರೆ. ಉತ್ತರಾಖಂಡದ ಎದುರು ತಂಡದ ಗೆಲುವಿನ ರೂವಾರಿಯೂ ಆಗಿದ್ದಾರೆ.

ಹೋದ ಸಲದ ರಣಜಿ ಟ್ರೋಫಿ ಕ್ರಿಕೆಟ್ ಋತುವಿನ ಮೊದಲ ಐದು ಪಂದ್ಯಗಳಲ್ಲಿ 145 ರನ್‌ಗಳನ್ನಷ್ಟೇ ಸೇರಿಸಿದ್ದ ಎಡಗೈ ಬ್ಯಾಟರ್ ಸ್ಮರಣ್ ರವಿಚಂದ್ರನ್ ಆರನೇ ಪಂದ್ಯದಲ್ಲಿ ದ್ವಿಶತಕ ಹೊಡೆದರು. ಅವತ್ತು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅವರು ಅರ್ಧಶತಕ, ಶತಕ ಮತ್ತು ದ್ವಿಶತಕ ಗಳಿಸಿದಾಗ ಸಂಭ್ರಮಿಸಿದ ರೀತಿ ಅವರ ಶಾಂತಚಿತ್ತದ ಪ್ರತಿಬಿಂಬದಂತಿತ್ತು. ಯಾವುದೇ ಅಬ್ಬರ, ನೆಗೆತ, ಜಿಗಿತಗಳಿರಲಿಲ್ಲ. ಶತಕ–ದ್ವಿಶತಕ ಪೂರೈಸಿದ ನಂತರ ತಮ್ಮ ಹೆಲ್ಮೆಟ್ ತೆಗೆದು ಎರಡೂ ಕೈಗಳನ್ನು ಮೇಲೆತ್ತಿ, ಸಹ ಆಟಗಾರರು ಇದ್ದ ಡ್ರೆಸಿಂಗ್